ವಿಜಯ ಕರ್ನಾಟಕ
ನಮ್ಮ ಕಲಬುರಗಿ
ಬುಧವಾರ, 27 ನವೆಂಬರ್ 2019
www.vijaykarnataka.com
twitter.com/vijaykarnataka
facebook.com/vijaykarnataka
www.vijaykarnatakaepaper.com
19° ಕನಿಷ್ಠ
32° ಗರಿಷ್ಠ

English ಕಲಿ
ವಿಕ
ಭಾಗ-47

Are you satisfied with your job?
ಆರ್ ಯು ಸ್ಯಾಟಿಸ್‌ಫೈಡ್ ವಿತ್ ಯುವರ್ ಜಾಬ್?
ನಿಮ್ಮ ಕೆಲಸ ನಿಮಗೆ ತೃಪ್ತಿ ಕೊಟ್ಟಿದೆಯಾ?
Yes, I am satisfied with my job.
ಯೆಸ್, ಐ ಯಾಮ್ ಸ್ಯಾಟಿಸ್‌ಫೈಡ್ ವಿತ್ ಮೈ ಜಾಬ್
ಹೌದು ನನ್ನ ಕೆಲಸ ನನಗೆ ತೃಪ್ತಿ ಕೊಟ್ಟಿದೆ.

TEST YOUR ENGLISH
Where _____ you live?
A) do B) is
C) doing D) None

ನಿನ್ನೆಯ ಪ್ರಶ್ನೆಯ ಸರಿ ಉತ್ತರ: What do you do on Sundays?

[illegible]

ಕಲಬುರಗಿ ಏರ್‌ಪೋರ್ಟ್, ಪ್ರಧಾನಿ ಮೋದಿ ಮೆಚ್ಚುಗೆ

- ವಿಕ ಸುದ್ದಿಲೋಕ ಕಲಬುರಗಿ

ಕಲಬುರಗಿ ವಿಮಾನ ನಿಲ್ದಾಣ ಕಾರ್ಯಾರಂಭಗೊಂಡಿರುವ ಹಿನ್ನೆಲೆಯಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಹಿಂದುಳಿದ ಪ್ರದೇಶ ಎಂಬ ಹಣೆಪಟ್ಟಿ ಧರಿಸಿರುವ ಕಲ್ಯಾಣ ಕರ್ನಾಟಕ ಭಾಗದಲ್ಲಿ ವಿಮಾನ ನಿಲ್ದಾಣ ಕಾರ್ಯಾರಂಭ ಮಾಡಿರುವುದು ಹಲವು ಆಯಾಮಗಳಲ್ಲಿ ಅಭಿವೃದ್ಧಿಗೆ ಶಕೆ ಆರಂಭಗೊಳ್ಳಲು ಮುನ್ನುಡಿ ಬರೆದಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಕೇಂದ್ರ ಸರಕಾರವು ದೇಶದ ಪ್ರತಿಯೊಂದು ಭಾಗಕ್ಕೂ ರಸ್ತೆ, ರೈಲು ಮತ್ತು ವಾಯು ಮತ್ತು ಜಲ ಸಾರಿಗೆ ಸಂಪರ್ಕ ಕಲ್ಪಿಸುವಲ್ಲಿ ಹೆಚ್ಚು ವೇಗವಾಗಿ ಶ್ರಮಿಸುತ್ತಿದೆ. ಅದರಲ್ಲೂ ವಿಮಾನಯಾನ ಕ್ಷೇತ್ರದಲ್ಲಿ ಕಳೆದ ಐದು ವರ್ಷಗಳಲ್ಲಿ ಸಾಮಾನ್ಯರ ಸಂಚಾರದಲ್ಲಿ ಗಣನೀಯ ಹೆಚ್ಚಳ ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಉಡಾನ್ ಯೋಜನೆ ಪರಿಚಯಿಸಿದೆ. ಈ ಎಲ್ಲ ಕಾರಣಗಳಿಂದಾಗಿ ಮುಂಬರುವ ದಿನಗಳಲ್ಲಿ ಕಲಬುರಗಿ ಸೇರಿದಂತೆ ಸುತ್ತಲಿನ ಎಲ್ಲ ಜಿಲ್ಲೆಗಳಲ್ಲಿ ಅಭಿವೃದ್ಧಿ ಕೆಲಸಗಳು ಹೆಚ್ಚು ವೇಗ ಪಡೆಯಲಿವೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಮೇಲಾಗಿ, ಕಲ್ಯಾಣ ಕರ್ನಾಟಕ ಭಾಗದ ಜನರ ಬದುಕಿನ ಮಟ್ಟ ಎತ್ತರಿಸುವಲ್ಲಿ ಕೇಂದ್ರ ಸರಕಾರ ತನ್ನ ಪ್ರಾಮಾಣಿಕ ಪ್ರಯತ್ನ ಮುಂದುವರಿಸಲಿದೆ ಎಂದು ಭರವಸೆ ನೀಡಿದ್ದಾರೆ.

ಡೆಪ್ಯೂಟಿ ಚನ್ನಬಸಪ್ಪ ಪ್ರಶಸ್ತಿ

ಕಲಬುರಗಿ: ಕಾರಂಜಾ ಮಠದಿಂದ ಕೊಡಲಾಗುವ ರಾಜ್ಯ ಮಟ್ಟದ 2019ನೇ ಸಾಲಿನ ಡೆಪ್ಯೂಟಿ ಚನ್ನಬಸಪ್ಪ ಪ್ರಶಸ್ತಿಗೆ ಕಲಬುರಗಿಯ ಮಕ್ಕಳ ಸಾಹಿತಿ ಎ.ಕೆ. ರಾಮೇಶ್ವರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಬೆಳಗಾವಿಯ ನಾಗನೂರು ರುದ್ರಾಕ್ಷಿ ಮಠದ ಡಾ. ಸಿದ್ಧರಾಮ ಸ್ವಾಮೀಜಿ ತಿಳಿಸಿದ್ದಾರೆ. ಪ್ರಶಸ್ತಿ ಹತ್ತು ಸಾವಿರ ರೂ, ಫಲಕ ಒಳಗೊಂಡಿದೆ. ಡಿಸೆಂಬರ್ 6ರಂದು ನಾಗನೂರು ಮಠದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಶ್ರೀಗಳು ತಿಳಿಸಿದ್ದಾರೆ.

ಐಎಸ್‌ಟಿಇ ಮಂಡಳಿಗೆ ಆಯ್ಕೆ

ಕಲಬುರಗಿ: ನವದೆಹಲಿಯಲ್ಲಿ ಭಾರತೀಯ ತಾಂತ್ರಿಕ ಶಿಕ್ಷಣ ಸಂಸ್ಥೆಯಾದ ಐಎಸ್‌ಟಿಇ ರಾಷ್ಟ್ರೀಯ ಕಾರ್ಯಕಾರಿ ಮಂಡಳಿ ಸದಸ್ಯರ ಹುದ್ದೆಗೆ [illegible]

ಕೆಕೆಆರ್‌ಡಿಬಿ ಅನುದಾನ । ರೂ.150 ಕೋಟಿ ವೆಚ್ಚದಲ್ಲಿ ನಿರ್ಮಾಣ । 300 ಹಾಸಿಗೆ ಸಾಮರ್ಥ್ಯ

ಫೆಬ್ರವರಿಯಲ್ಲಿ ಜಯದೇವ ಆಸ್ಪತ್ರೆ ಕಟ್ಟಡಕ್ಕೆ ಶಂಕುಸ್ಥಾಪನೆ

ಜಯದೇವ ಹೊಸ ಕಟ್ಟಡದ ವೈಶಿಷ್ಟ್ಯತೆ

125 ಹಾಸಿಗೆ ಸಾಮರ್ಥ್ಯದ ತೀವ್ರ ನಿಗಾ ಘಟಕ ಸ್ಥಾಪನೆ

ಒಟ್ಟು 4 ಆಪರೇಷನ್ ಥಿಯೇಟರ್ ನಿರ್ಮಾಣ

ಬಡ ಮತ್ತು ನಿರ್ಗತಿಕ ಹೃದ್ರೋಗಿಗಳಿಗೆ ಕನಿಷ್ಠ ಶುಲ್ಕದಲ್ಲಿ ಸೇವೆ ವ್ಯವಸ್ಥೆ

ತುರ್ತು ಸಂದರ್ಭಗಳಲ್ಲಿ ಚಿಕಿತ್ಸೆಗೆ ಮೊದಲ ಆದ್ಯತೆ

- ವಿಕ ಸುದ್ದಿಲೋಕ ಕಲಬುರಗಿ

ಬಹುನಿರೀಕ್ಷಿತ ಕಲಬುರಗಿ ಜಯದೇವ ಆಸ್ಪತ್ರೆಯ ಸ್ವಂತ ಕಟ್ಟಡ ನಿರ್ಮಾಣಕ್ಕೆ ಬರುವ ಫೆಬ್ರವರಿಯಲ್ಲಿ ಶಂಕುಸ್ಥಾಪನೆ ನೆರವೇರಲಿದೆ. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಮಂಜೂರು ಮಾಡಿರುವ ರೂ.150 ಕೋಟಿ ಮೊತ್ತದಲ್ಲಿ ವಿಶ್ವದರ್ಜೆಯ ಅತ್ಯಾಧುನಿಕ ಆಸ್ಪತ್ರೆ ತಲೆ ಎತ್ತಲಿದೆ ಎಂದು ಜಯದೇವ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ ತಿಳಿಸಿದರು.

ಇಲ್ಲಿನ ಜಿಮ್ಸ್ ಆಸ್ಪತ್ರೆಯ ಮೂರನೇ ಮಹಡಿಯ ಜಯದೇವ ಆಸ್ಪತ್ರೆಯ ಸಭಾಂಗಣದಲ್ಲಿ ಮಂಗಳವಾರ ಮಧ್ಯಾಹ್ನ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಒಟ್ಟು 7 ಎಕರೆ 10 ಗುಂಟೆ ಪ್ರದೇಶದಲ್ಲಿ ನಿರ್ಮಾಣಗೊಳ್ಳಲಿರುವ ಹೃದ್ರೋಗ ಚಿಕಿತ್ಸಾ ಆಸ್ಪತ್ರೆಯಲ್ಲಿ ವಿಶ್ವದರ್ಜೆಯ ಎಲ್ಲ ಸವಲತ್ತುಗಳು ದೊರಕಲಿವೆ ಎಂದರು.

ಸದ್ಯಕ್ಕೆ ರೂ. 150 ಕೋಟಿ ಅಂದಾಜು ವೆಚ್ಚದಲ್ಲಿ ಆಸ್ಪತ್ರೆ ನಿರ್ಮಾಣ ಮತ್ತು ಆಧುನಿಕ ವೈದ್ಯಕೀಯ ಸಾಮಗ್ರಿಗಳ ಖರೀದಿ ಕಾರ್ಯ ನಡೆಯಲಿದೆ. ಮೀಸಲಿಟ್ಟಿರುವ ಹಣಕ್ಕಿಂತಲೂ ಅಧಿಕ ಹಣದ ಅವಶ್ಯಕತೆ ಎದುರಾದರೆ, ಆ ಹಣವನ್ನು ಜಯದೇವ ಆಸ್ಪತ್ರೆಯ ಆಂತರಿಕ ವಿಭಾಗದಿಂದ ಅದನ್ನು ಭರಿಸಲಾಗುವುದು ಎಂದು ಮಾಹಿತಿ ನೀಡಿದರು.

2016ರ ಏಪ್ರಿಲ್ ತಿಂಗಳಿಂದ ಕಲಬುರಗಿ ನಗರದ ಜಿಮ್ಸ್ ಕಟ್ಟಡದಲ್ಲಿ ಜಯದೇವ ಹೃದ್ರೋಗ ವಿಜ್ಞಾನಗಳ ಸಂಶೋಧನಾ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ. ಇದೇ ಅಕ್ಟೋಬರ್‌ವರೆಗೆ ಜಯದೇವ ಕಲಬುರಗಿ ಘಟಕದಲ್ಲಿ ನಿತ್ಯ 250-350ರ ಅಂದಾಜಿನಲ್ಲಿ ಈವರೆಗೆ ಸುಮಾರು 1,99,690 ಹೊರ ರೋಗಿಗಳು (ಒಪಿಡಿ) ಮತ್ತು ನಿತ್ಯ 30ರಿಂದ 45 ರೋಗಿಗಳ ಆಧಾರದಲ್ಲಿ ಈವರೆಗೆ 16351 ಒಳರೋಗಿಗಳಿಗೆ ಯಶಸ್ವಿ ಚಿಕಿತ್ಸೆ ನೀಡಲಾಗಿದೆ. ಇರುವ 135 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯಲ್ಲಿ ಈವರೆಗೆ 411 ವ್ಯಕ್ತಿಗಳಿಗೆ ಯಶಸ್ವೀ ತೆರೆದ ಹೃದಯ ಶಸ್ತ್ರಚಿಕಿತ್ಸೆ ಕೈಗೊಳ್ಳಲಾಗಿದೆ ಎಂದು ನುಡಿದರು.

ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ, ಎಚ್‌ಕೆಸಿಸಿಐ ಅಧ್ಯಕ್ಷ ಅಮರನಾಥ ಸಿ.ಪಾಟೀಲ್, ಉಪಾಧ್ಯಕ್ಷ ಶರಣು ಪಪ್ಪಾ, ಕಾರ್ಯದರ್ಶಿ ಶಶಿಕಾಂತ ಪಾಟೀಲ್, ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಬಾಬುರಾವ್ ಹುಡಗೀಕರ್, ಹೃದ್ರೋಗ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ವೀರೇಶ ಪಾಟೀಲ್, ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಚಿಕ್ಕತಿಮ್ಮಯ್ಯ, ಸಾರ್ವಜನಿಕ ಸಂಪರ್ಕಾಧಿಕಾರಿ ಸಂತೋಷ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

> ಯೂರೋಪಿಯನ್ ಹಾರ್ಟ್ ಜರ್ನಲ್ ತನ್ನ ಇತ್ತೀಚಿನ ಸಂಚಿಕೆಯಲ್ಲಿ ಜಯದೇವ ಹೃದ್ರೋಗ ವಿಜ್ಞಾನಗಳ ಸಂಶೋಧನಾ ಸಂಸ್ಥೆಯನ್ನು ಜಗತ್ತಿನ ಅತ್ಯದ್ಭುತ (ಎಕ್ಸಲೆಂಟ್) ಆಸ್ಪತ್ರೆ ಎಂದು ಗುಣಗಾನ ಮಾಡಿದೆ. ಇದೇ ಮೊದಲ ಬಾರಿಗೆ ಇಂಥದ್ದೊಂದು ಅಂತಾರಾಷ್ಟ್ರೀಯ ಖ್ಯಾತಿಯ ಪ್ರಶಂಸೆ ಜಯದೇವ ಪಾಲಿಗೆ ಲಭಿಸಿದೆ.
>
> -ಡಾ.ಸಿ.ಎನ್.ಮಂಜುನಾಥ, ನಿರ್ದೇಶಕರು
> ಜಯದೇವ ಆಸ್ಪತ್ರೆ



ಕಲಬುರಗಿ ನಗರದಲ್ಲಿ ತಲೆ ಎತ್ತಲಿರುವ ಜಯದೇವ ಹೃದ್ರೋಗ ವಿಜ್ಞಾನಗಳ ಸಂಶೋಧನಾ ಸಂಸ್ಥೆಯ ವಿನ್ಯಾಸ ಕಟ್ಟಡ.



ಕಲಬುರಗಿಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಆವರಣದಲ್ಲಿ ರೂ.150 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ 300 ಹಾಸಿಗೆ ಸಾಮರ್ಥ್ಯದ ಜಯದೇವ ಆಸ್ಪತ್ರೆಯ ಸ್ಥಳ ಪರಿಶೀಲನೆ ವೇಳೆ ಕಟ್ಟಡದ ನೀಲ ನಕ್ಷೆಯನ್ನು ಜಯದೇವ ಹೃದ್ರೋಗ ವಿಜ್ಞಾನಗಳ ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ ಮಂಗಳವಾರ ವೀಕ್ಷಿಸಿದರು.

ಎರಡು ತಿಂಗಳಲ್ಲಿ ಮತ್ತೊಂದು ಕ್ಯಾತ್‌ಲ್ಯಾಬ್

ಕಲಬುರಗಿಯ ಜಯದೇವ ಹೃದ್ರೋಗ ವಿಜ್ಞಾನಗಳ ಸಂಶೋಧನಾ ಸಂಸ್ಥೆಯಲ್ಲಿ ಕೇವಲ ಒಂದು ಕ್ಯಾತ್‌ಲ್ಯಾಬ್ ಬಳಸಿ ಆಂಜಿಯೋಪ್ಲಾಸ್ಟಿ ಕೈಗೊಳ್ಳಲಾಗುತ್ತಿದೆ. ಹೀಗಾಗಿ, ತಜ್ಞ ವೈದ್ಯರು ರಾತ್ರಿ 10.30ರವರೆಗೆ ನಿತ್ಯ ಕಾರ್ಯನಿರ್ವಹಿಸಬೇಕಾದ ಅನಿವಾರ್ಯತೆ ಎದುರಾಗಿದೆ. ಹೀಗಾಗಿ, ಮುಂಬರುವ ಎರಡು ತಿಂಗಳಲ್ಲಿ ಮತ್ತೊಂದು ಕ್ಯಾತ್‌ಲ್ಯಾಬ್ ಕಾರ್ಯಾರಂಭ ಮಾಡಲಿದೆ ಎಂದು ಡಾ.ಮಂಜುನಾಥ ತಿಳಿಸಿದರು. ಹೆಚ್ಚುವರಿ ಕ್ಯಾತ್‌ಲ್ಯಾಬ್ ಸ್ಥಾಪನೆಯಿಂದಾಗಿ ಆಸ್ಪತ್ರೆಯ ತಜ್ಞ ವೈದ್ಯರು ಉತ್ತಮ ರೀತಿ ಕಾರ್ಯಕ್ಷಮತೆ ಅಳವಡಿಸಿಕೊಳ್ಳಲು ಸಾಧ್ಯವಾಗಲಿದೆ ಎಂದ ಅವರು, ಕ್ಯಾತ್‌ಲ್ಯಾಬ್ ಹೊರಸೂಸುವ ವಿಕಿರಣಗಳಿಂದಾಗಿ ಹೃದ್ರೋಗ ತಜ್ಞರು ಹಲವು ಆರೋಗ್ಯ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಮುಖ್ಯವಾಗಿ, ಮೆದುಳು, ಥೈರಾಯ್ಡ್, ಕಣ್ಣು ಮತ್ತು ಅಸ್ಥಿಮಜ್ಜೆ ಸಂಬಂಧಿತ ಸಮಸ್ಯೆಗಳನ್ನು ಹೃದ್ರೋಗ ತಜ್ಞರು ಎದುರಿಸುತ್ತಿದ್ದಾರೆ. ಹೀಗಾಗಿ, ನೂತನ ಘಟಕದ ಸ್ಥಾಪನೆಯಿಂದಾಗಿ ವೈದ್ಯರು ತಮ್ಮ ನಿಗದಿತ ಅವಧಿಯಲ್ಲಿ ಉತ್ತರದಾಯಿತ್ವವಾಗಿ ಕಾರ್ಯನಿರ್ವಹಿಸಲು ಅನುಕೂಲ ಆಗಲಿದೆ